**ಕರ್ನಾಟಕ ಸರ್ಕಾರ**

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ**

**ನೋವೆಲ್ ಕರೋನಾ ವೈರಸ್ (ಕೋವಿಡ್–19)**

**ಪತ್ರಿಕಾ ಪ್ರಕಟಣೆ**

**ದಿನಾಂಕ: 21.04.2020** **ಸಂಜೆಯ ವರದಿ**

ಇಲ್ಲಿಯವರೆಗೆ ಭಾರತವೂ ಸೇರಿದಂತೆ **213** ದೇಶ / ಪ್ರದೇಶಗಳನ್ನು ಬಾಧಿಸಿರುವ ಇತ್ತೀಚಿನ ನೋವೆಲ್ ಕರೋನಾ ವೈರಸ್‌ನ್ನು (ಕೋವಿಡ್–19) ಅಂತರಾಷ್ಟ್ರೀಯ ಆಂತಕದ ಸಾರ್ವಜನಿಕ ಆರೋಗ್ಯ ತುರ್ತು ಪರಿಸ್ಥಿತಿ (ಪಿಹೆಚ್‌ಐಸಿ) ಎಂದು ವಿಶ್ವ ಆರೋಗ್ಯ ಸಂಸ್ಥೆಯು ಘೋಷಿಸಿದೆ. 11ನೇ ಮಾರ್ಚ್ 2020 ರಂದು ವಿಶ್ವ ಆರೋಗ್ಯ ಸಂಸ್ಥೆಯು ಕೋವಿಡ್–19 ವನ್ನು ಸರ್ವವ್ಯಾಪಿ ರೋಗ ಎಂದು ಘೋಷಿಸಿದೆ.

ಈ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯವು ರೋಗ ತಡೆಗಟ್ಟುವ ಮುಂಜಾಗ್ರತಾ ಕ್ರಮಗಳನ್ನು ಹಾಗೂ ಎಲ್ಲಾ ರೀತಿಯ ಸರ್ವೇಕ್ಷಣೆಯನ್ನು ಮತ್ತು ಸಮೂಹ ನಿಯಂತ್ರಣ ಕಾರ್ಯತಂತ್ರಗಳನ್ನು ಬಲಪಡಿಸಿದೆ. ಅಂತರಾಷ್ಟ್ರೀಯ ಪ್ರಯಾಣ ಹಿನ್ನಲೆ ಹೊಂದಿರುವ ಎಲ್ಲರ ಸಾರ್ವತ್ರಿಕ ತಪಾಸಣೆ ಮುಂದುವರೆದಿದೆ.

**"ದಿನಾಂಕ 21.04.2020, ಸಾಯಂಕಾಲ 5.00 ಗಂಟೆಯ ವರದಿಯಂತೆ, ಕರ್ನಾಟಕ ರಾಜ್ಯದಲ್ಲಿ ಇಲ್ಲಿಯವರೆಗೆ ಒಟ್ಟು 418 ಕೋವಿಡ್–19 ಖಚಿತಪಟ್ಟ ಪ್ರಕರಣಗಳಿರುತ್ತವೆ. ಅವುಗಳ ಪೈಕಿ 17 ಮರಣ ಮತ್ತು 129 ಜನ ಬಿಡುಗಡೆ ಹೊಂದಿರುತ್ತಾರೆ."**

- ಕೋವಿಡ್–19 ಪೀಡಿತ ಒಟ್ಟು **272** ವ್ಯಕ್ತಿಗಳಲ್ಲಿ, **267** ರೋಗಿಗಳು (ಒಬ್ಬರು ಗರ್ಭಿಣಿಯಾಗಿದ್ದು P-176) ಗೊತ್ತುಪಡಿಸಿದ ಆಸ್ಪತ್ರೆಗಳ ಪ್ರತ್ಯೇಕ ವಾರ್ಡ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಇವರ ಆರೋಗ್ಯವು ಸ್ಥಿರವಾಗಿರುತ್ತದೆ ಹಾಗೂ **ಐವರನ್ನು ಐ.ಸಿ.ಯು.ನಲ್ಲಿ** (P101, P273, P349, P369 & P409) ಇಡಲಾಗಿರುತ್ತದೆ.
- ದಿನಾಂಕ 20.04.2020, ಸಂಜೆ 5:00 ರಿಂದ ದಿನಾಂಕ 21.04.2020 ಸಂಜೆ 5:00 ರವರೆಗೆ ರಾಜ್ಯದಲ್ಲಿ **10** ಹೊಸ ಕೋವಿಡ್ –19 ಖಚಿತ ಪ್ರಕರಣಗಳು ಪತ್ತೆಯಾಗಿದ್ದು, ವಿವರ ಕೆಳಕಂಡಂತೆ ಇರುತ್ತದೆ.

| ಕ್ರಮ ಸಂಖ್ಯೆ | ಪ್ರಕರಣ ಸಂಖ್ಯೆ | ವಯಸ್ಸು (ವರ್ಷ) | ಲಿಂಗ | ವಾಸ ಸ್ಥಳ | ಪ್ರಯಾಣದ ಹಿನ್ನಲೆ / ಸಂಪರ್ಕ | ಪ್ರತ್ಯೇಕಿಸಿದ ಆಸ್ಪತ್ರೆ |
|---|---|---|---|---|---|---|
| 1 | P-409 | 67 | ಹೆಣ್ಣು | ಬಂಟ್ವಾಳ, ದಕ್ಷಿಣ ಕನ್ನಡ | ತೀವ್ರ ಉಸಿರಾಟದ ತೊಂದರ (SARI) | ನಿಗಧಿತ ಆಸ್ಪತ್ರೆ, ದಕ್ಷಿಣ ಕನ್ನಡ |
| 2 | P-410 | 18 | ಹೆಣ್ಣು | ವಿಜಯಪುರ | P306ರ ಸಂಪರ್ಕ | ನಿಗಧಿತ ಆಸ್ಪತ್ರೆ, ವಿಜಯಪುರ |
| 3 | P-411 | 30 | ಹೆಣ್ಣು | ವಿಜಯಪುರ | P306ರ ಸಂಪರ್ಕ | ನಿಗಧಿತ ಆಸ್ಪತ್ರೆ, ವಿಜಯಪುರ |
| 4 | P-412 | 29 | ಗಂಡು | ಕಲಬುರಗಿ | Influenza Like Illness (ILI) | ನಿಗಧಿತ ಆಸ್ಪತ್ರೆ, ಕಲಬುರಗಿ |
| 5 | P-413 | 61 | ಗಂಡು | ಕಲಬುರಗಿ | ಸಂಪರ್ಕ ಪತ್ತೆ ಹಚ್ಚಲಾಗುತ್ತಿದೆ. | ನಿಗಧಿತ ಆಸ್ಪತ್ರೆ, ಕಲಬುರಗಿ |
| 6 | P-414 | 80 | ಗಂಡು | ಕಲಬುರಗಿ | ತೀವ್ರ ಉಸಿರಾಟದ ತೊಂದರ (SARI) | ನಿಗಧಿತ ಆಸ್ಪತ್ರೆ, ಕಲಬುರಗಿಯಲ್ಲಿ ನಿಧನ ಹೊಂದಿರುತ್ತಾರೆ. |
| 7 | P-415 | 18 | ಹೆಣ್ಣು | ವಿಜಯಪುರ | P306ರ ಸಂಪರ್ಕ | ನಿಗಧಿತ ಆಸ್ಪತ್ರೆ, ವಿಜಯಪುರ |
| 8 | P-416 | 26 | ಗಂಡು | ನಂಜನಗೂಡು, ಮೈಸೂರು | P52ರ ದ್ವಿತೀಯ ಸಂಪರ್ಕ | ನಿಗಧಿತ ಆಸ್ಪತ್ರೆ, ಮೈಸೂರು |
| 9 | P-417 | 26 | ಗಂಡು | ನಂಜನಗೂಡು, ಮೈಸೂರು | P52ರ ದ್ವಿತೀಯ ಸಂಪರ್ಕ | ನಿಗಧಿತ ಆಸ್ಪತ್ರೆ, ಮೈಸೂರು |
| 10 | P-418 | 25 | ಹೆಣ್ಣು | ಬೆಳಗಾವಿ | P293ರ ದ್ವಿತೀಯ ಸಂಪರ್ಕ | ನಿಗಧಿತ ಆಸ್ಪತ್ರೆ, ಬೆಳಗಾವಿ |

**ಮರಣ ವರದಿ:**

P-414, 80 ವರ್ಷದ ಪುರಷ, ಕಲಬುರಗಿ ಜಿಲ್ಲೆಯ ನಿವಾಸಿಯಾಗಿದ್ದು, ಕಳೆದ 4 ವರ್ಷದಿಂದ ಪಾರ್ಕಿನ್‌ಸನ್ಸ್ ಕಾಯಿಲೆಯಿಂದ ಬಳಲುತ್ತಿದ್ದು ಹಾಗೂ ಕಳೆದ 3 ವರ್ಷಗಳಿಂದ ಬೆಡ್‌ರಿಡನ್ ಆಗಿದ್ದು ದಿನಾಂಕ 19.04.2020 ರಂದು ತೀವ್ರ ಉಸಿರಾಟದ ತೊಂದರೆಯ ಹಿನ್ನಲೆಯಲ್ಲಿ ದಾಖಲಾಗಿ, ಕಲಬುರಗಿ ನಿಗಧಿತ ಆಸ್ಪತ್ರೆಯಲ್ಲಿ ನಿಧನರಾಗಿರುತ್ತಾರೆ.

| ಕೋವಿಡ್–19 ಜಿಲ್ಲಾವಾರು ಸಂಕ್ಷಿಪ್ತ ವರದಿ | | | | | |
|---|---|---|---|---|---|
| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ಸೋಂಕಿತರು | ಬಿಡುಗಡೆಯಾದವರ ಸಂಖ್ಯೆ | ಸಕ್ರಿಯ ಪ್ರಕರಣಗಳು | ಮರಣ ಹೊಂದಿದವರ ಸಂಖ್ಯೆ |
| 1 | ಬೆಂಗಳೂರು ನಗರ | 89 | 48 | 37 | 4 |
| 2 | ಮೈಸೂರು | 86 | 31 | 55 | 0 |
| 3 | ಬೆಳಗಾವಿ | 43 | 3 | 39 | 1 |
| 4 | ವಿಜಯಪುರ | 35 | 0 | 33 | 2 |
| 5 | ಕಲಬುರಗಿ | 30 | 3 | 23 | 4 |
| 6 | ಬಾಗಲಕೋಟೆ | 21 | 2 | 18 | 1 |
| 7 | ಚಿಕ್ಕಬಳ್ಳಾಪುರ | 16 | 9 | 5 | 2 |
| 8 | ಬೀದರ್ | 15 | 0 | 15 | 0 |
| 9 | ದಕ್ಷಿಣ ಕನ್ನಡ | 15 | 11 | 3 | 1 |
| 10 | ಬಳ್ಳಾರಿ | 13 | 0 | 13 | 0 |
| 11 | ಬೆಂಗಳೂರು ಗ್ರಾಮಾಂತರ | 12 | 4 | 8 | 0 |
| 12 | ಮಂಡ್ಯ | 12 | 0 | 12 | 0 |
| 13 | ಉತ್ತರ ಕನ್ನಡ | 11 | 9 | 2 | 0 |
| 14 | ಧಾರವಾಡ | 7 | 1 | 6 | 0 |
| 15 | ಗದಗ | 4 | 0 | 3 | 1 |
| 16 | ಉಡುಪಿ | 3 | 3 | 0 | 0 |
| 17 | ದಾವಣಗೆರೆ | 2 | 2 | 0 | 0 |
| 18 | ತುಮಕೂರು | 2 | 1 | 0 | 1 |
| 19 | ಚಿತ್ರದುರ್ಗ | 1 | 1 | 0 | 0 |
| 20 | ಕೊಡಗು | 1 | 1 | 0 | 0 |
| ಒಟ್ಟು | | **418** | **129** | **272** | **17** |

***ಆಸ್ಪತ್ರೆಯಿಂದ ಬಿಡುಗಡೆಯಾದವರ ಸಂಖ್ಯೆ – 17 (P94, P126, P128, P134, P136, P137, P148, P152, P154, P160, P161, P162, P163, P167, P168, P184 & P200)**

ಮರಣ ಸಂಖ್ಯೆ – 17 (**P6, P53, P60, P125, P166, P177, P195, P205, P219, P250, P252, P257, P279, P281, P374, P390 & P414)**

ಎಲ್ಲಾ ಕೋವಿಡ್–19 ಸೋಂಕಿತ ವ್ಯಕ್ತಿಗಳ ಸಂಪರ್ಕದಲ್ಲಿರುವವರನ್ನು ಪತ್ತೆ ಹಚ್ಚುವ ಕಾರ್ಯ ಜಾರಿಯಲ್ಲಿರುತ್ತದೆ.

**ಸೂಚನೆ:** ಕರ್ನಾಟಕದಲ್ಲಿ ಪತ್ತೆ ಮಾಡಲಾಗಿರುವ **418** ಪ್ರಕರಣಗಳಲ್ಲಿ **9** ಪ್ರಕರಣಗಳು ಕೇರಳದವರಾಗಿರುತ್ತಾರೆ. ಅವರು ಕರ್ನಾಟಕದ ವಿಮಾನ ನಿಲ್ದಾಣಗಳ ಮೂಲಕ ಕೇರಳಕ್ಕೆ ಪ್ರಯಾಣಿಸುತ್ತಿರುವಾಗ ಪತ್ತೆ ಮಾಡಿ, ಅವರಿಗೆ ಕರ್ನಾಟಕದಲ್ಲೇ ಚಿಕಿತ್ಸೆ ನೀಡಲಾಗುತ್ತಿದೆ.

| ಸಂಕ್ಷಿಪ್ತ ವರದಿ | | | |
|---|---|---|---|
| | **ಚಟುವಟಿಕೆಗಳು** | **ಒಟ್ಟು** | |
| | | **ಇಂದಿನ** | **ಸಂಚಿತ** |
| **A** | ವಿಮಾನ ನಿಲ್ದಾಣ ಮತ್ತು ಬಂದರುಗಳಲ್ಲಿ ತಪಾಸಣೆಗೊಳಪಟ್ಟ ಒಟ್ಟು ಪ್ರಯಾಣಿಕರು | 64* | 140200 |
| **B** | ನಿಗಾವಣೆಯಲ್ಲಿರುವ ಒಟ್ಟು ಸಂಪರ್ಕ ವ್ಯಕ್ತಿಗಳು<br>ಪ್ರಥಮ<br>ದ್ವಿತೀಯ | 4059<br>10282 | |
| **C** | **ನಿಗಾವಣೆಯಲ್ಲಿರುವ ಒಟ್ಟು ವ್ಯಕ್ತಿಗಳು** | **14341** | |
| **D** | ಆರೋಗ್ಯ ಕೇಂದ್ರಗಳಲ್ಲಿನ ಒಟ್ಟು ಪ್ರತ್ಯೇಕಿತ ವ್ಯಕ್ತಿಗಳು | 174 | 1109 |
| **E** | ಒಟ್ಟು ಪರೀಕ್ಷಿಸಿದ ಮಾದರಿಗಳು | 2773 | 26233 |
| **F** | ನೆಗೆಟಿವ್ ವರದಿಯಾದ ಒಟ್ಟು ಮಾದರಿಗಳು | 2725 | 22222 |
| | **ಕೋವಿಡ್–19 ಖಚಿತವಾದ (ಪಾಸಿಟಿವ್) ಒಟ್ಟು ಮಾದರಿಗಳು** | **10** | **418** |

* ಮಂಗಳೂರು ಬಂದರು – 64

| ನಿಗದಿತ ಆಸ್ಪತ್ರೆಗಳಲ್ಲಿ ಶಂಕಿತ ವ್ಯಕ್ತಿಗಳನ್ನು ಪ್ರತ್ಯೇಕವಾಗಿರಿಸಲ್ಪಟ್ಟವರ ವಿವರ | | | | |
|---|---|---|---|---|
| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ಇಂದಿನ ಹೊಸ ದಾಖಲಾತಿ | ಇಂದಿನ ಒಟ್ಟು ಬಿಡುಗಡೆ | ಒಟ್ಟು ಪ್ರತ್ಯೇಕಗೊಳಿಸಲಾಗಿರುವವರು |
| 1 | ಬಾಗಲಕೋಟೆ | 1 | 0 | 34 |
| 2 | ಬಳ್ಳಾರಿ | 0 | 0 | 13 |
| 3 | ಬೆಳಗಾವಿ | 0 | 0 | 42 |
| 4 | ಬೆಂಗಳೂರು ಗ್ರಾಮಾಂತರ | 0 | 0 | 23 |
| 5 | ಬೆಂಗಳೂರು ನಗರ (ನಿಗದಿತ ಆಸ್ಪತ್ರೆಗಳು) | 34 | 4 | 128 |
| 6 | ಬೀದರ್ | 0 | 16 | 132 |
| 7 | ಚಾಮರಾಜನಗರ | 0 | 0 | 0 |
| 8 | ಚಿಕ್ಕಬಳ್ಳಾಪುರ | 0 | 14 | 22 |
| 9 | ಚಿಕ್ಕಮಗಳೂರು | 58 | 48 | 58 |
| 10 | ಚಿತ್ರದುರ್ಗ | 0 | 1 | 10 |
| 11 | ದಕ್ಷಿಣ ಕನ್ನಡ | 21 | 1 | 72 |
| 12 | ದಾವಣಗೆರೆ | 4 | 5 | 6 |
| 13 | ದಾರವಾಡ | 2 | 0 | 10 |
| 14 | ಗದಗ | 0 | 0 | 26 |
| 15 | ಹಾಸನ | 0 | 0 | 27 |
| 16 | ಹಾವೇರಿ | 0 | 5 | 12 |
| 17 | ಕಲಬುರಗಿ | 18 | 0 | 147 |
| 18 | ಕೊಡಗು | 0 | 0 | 25 |
| 19 | ಕೋಲಾರ | 1 | 0 | 7 |
| 20 | ಕೊಪ್ಪಳ | 0 | 0 | 1 |
| 21 | ಮಂಡ್ಯ | 0 | 0 | 12 |
| 22 | ಮೈಸೂರು | 0 | 0 | 60 |
| 23 | ರಾಯಚೂರು | 4 | 4 | 9 |
| 24 | ರಾಮನಗರ | 0 | 0 | 3 |
| 25 | ಶಿವಮೊಗ್ಗ | 10 | 11 | 10 |
| 26 | ತುಮಕೂರು | 12 | 6 | 42 |
| 27 | ಉಡುಪಿ | 0 | 23 | 33 |
| 28 | ಉತ್ತರ ಕನ್ನಡ | 0 | 0 | 18 |
| 29 | ವಿಜಯಪುರ | 1 | 0 | 53 |
| 30 | ಯಾದಗಿರಿ | 4 | 2 | 30 |
| 31 | ಬೆಂಗಳೂರು ನಗರ (ಆರ್.ಜಿ.ಐ.ಸಿ.ಡಿ) | 0 | 4 | 7 |
| 32 | ಬಿ.ಬಿ.ಎಂ.ಪಿ. | 4 | 0 | 37 |
| **Total** | | **174** | **144** | **1109** |

## ಇಂದಿನ ವಿಷಯಗಳು

| | |
|---|---|
| 1 | ಮಾನ್ಯ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ರವರು ಸುತ್ತೋಲೆಯನ್ನು ಹೊರಡಿಸಿ ಸಚಿವಾಲಯ ಸೇರಿದಂತೆ, (1) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (2) ವೈದ್ಯಕೀಯ ಶಿಕ್ಷಣ ಇಲಾಖೆ, (3) ಒಳಾಡಳಿತ ಇಲಾಖೆ, (4) ಕಂದಾಯ ಇಲಾಖೆ, (5) ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, (6) ನಗರ ಅಭಿವೃದ್ಧಿ ಇಲಾಖೆ, (7) ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, (8) ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, (9) ಸಾರಿಗೆ ಇಲಾಖೆ, (10) ಇಂಧನ ಇಲಾಖೆ, (11) ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಇ–ಆಡಳಿತ), (12) ರಾಜ್ಯದಲ್ಲಿರುವ ಎಲ್ಲಾ ಖಜಾನೆಗಳನ್ನು ಸೇರಿದಂತೆ ಆರ್ಥಿಕ ಇಲಾಖೆ, (13) ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ, |

| | |
|---|---|
| | (14) ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ; (15) ಕೃಷಿ ಉತ್ಪನ್ನ ಮಾರುಕಟ್ಟೆ; (16) ಕೃಷಿ ಇಲಾಖೆ; (17) ಕಾರ್ಮಿಕ ಇಲಾಖೆ ಹಾಗೂ (18) ತೋಟಗಾರಿಕೆ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ವರ್ಗದ ಅಧಿಕಾರಿ / ಸಿಬ್ಬಂದಿಗಳು ಕರ್ತವ್ಯಕ್ಕೆ ಹಾಜರಾಗಲು ಹಾಗೂ ಮೇಲ್ಕಾಣಿಸಿದ ಇಲಾಖೆಗಳನ್ನು ಹೊರತುಪಡಿಸಿ, ಉಳಿದ ಇಲಾಖೆಗಳಲ್ಲಿನ 33% ರಷ್ಟು ಸಿಬ್ಬಂದಿಗಳು ಕರ್ತವ್ಯಕ್ಕೆ ಹಾಜರಾಗುವಂತೆ ನಿರ್ದೇಶಿಸಿರುತ್ತಾರೆ.<br>ಸದರಿ ಸುತ್ತೋಲೆಯು ದಿನಾಂಕ 20.04.2020 ರಿಂದ ದಿನಾಂಕ 03.05.2020 ರವರೆಗೆ ಜಾರಿಯಲ್ಲಿರುತ್ತದೆ ಎಂದು ತಿಳಿಸಲಾಗಿರುತ್ತದೆ (ಸುತ್ತೋಲೆ ಸಂಖ್ಯೆ: ಸಿಆಸುಇ 123 ಡಿಬಿಎಂ2020(ಭಾಗ) ದಿನಾಂಕ:18.04.2020). |
| 2 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಸುತ್ತೋಲೆ ಹೊರಡಿಸಿ, ರಾಜ್ಯದ ಖಾಸಗಿ ವೈದ್ಯಕೀಯ ಮಹಾವಿದ್ಯಾಲಯಗಳನ್ನು ಜ್ವರ ಕ್ಲಿನಿಕ್‌ಗಳನ್ನು ರಚಿಸಿಕೊಳ್ಳುವಲ್ಲಿ ಬೆಂಬಲವನ್ನು ಕೋರಿದೆ ಹಾಗೂ ಖಾಸಗಿ ವೈದ್ಯಕೀಯ ಮಹಾವಿದ್ಯಾಲಯಗಳು ತಮ್ಮ ಆಸ್ಪತ್ರೆಯಲ್ಲಿ ಜ್ವರ ಕ್ಲಿನಿಕ್‌ಗಳನ್ನು ರಚಿಸಿಕೊಳ್ಳಲು ಸಮ್ಮತಿಯನ್ನು ಸಲ್ಲಿಸಬೇಕಾಗಿರುತ್ತದೆ ಎಂದು ತಿಳಿಸಲಾಗದೆ.<br>ಜ್ವರ ಕ್ಲಿನಿಕ್‌ಗಳ ಮೇಲ್ವಿಚಾರಣೆ ಹಾಗೂ ಉಸ್ತುವಾರಿಯು ಜಿಲಾಡಳಿತದ ಅಧೀನದಲ್ಲಿರುತ್ತದೆ ಹಾಗೂ ಸದರಿ ಕ್ಲಿನಿಕ್‌ಗಳಿಗೆ ಅವಶ್ಯಕ ಪರಿಕರ ಮತ್ತು Personal Protective Equipment (PPE) ಗಳನ್ನು ಜಿಲ್ಲಾಡಳಿತದಿಂದ ಸಂಪೂರ್ಣ ಉಚಿತವಾಗಿ ನೀಡಲಾಗುವುದು (ಸುತ್ತೋಲೆ ಸಂಖ್ಯೆ: HFW99CGM2020 ದಿನಾಂಕ: 20.04.2020). |
| 3 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಸುತ್ತೋಲೆ ಹೊರಡಿಸಿ, ರಾಜ್ಯದ ಖಾಸಗಿ ಆರೋಗ್ಯ ಕೇಂದ್ರಗಳು ತಮ್ಮ ಅಡಿಯಲ್ಲಿನ ಜ್ವರ ಕ್ಲಿನಿಕ್‌ಗಳನ್ನು ಜಿಲ್ಲಾ ಆರೋಗ್ಯ ಅಧಿಕಾರಿಯವರಲ್ಲಿ ಕೆ.ಪಿ.ಎಂ.ಇ. ಕಾಯ್ದೆ 2007 ರಂತೆ ನೊಂದಾಯಿಸಿಕೊಳ್ಳಲು ನಿರ್ದೇಶಿಸಲಾಗಿದೆ ಹಾಗೂ ಸದರಿ ನೋಂದಾಯಿತ ಜ್ವರ ಕ್ಲಿನಿಕ್‌ಗಳಲ್ಲಿನ Severe Acute Respiratory Infections (SARI) ಮತ್ತು Influenza Like Illness (ILI) ಪ್ರಕರಣಗಳ ವರದಿಗಾಗಿ ಅಗತ್ಯ ಕ್ರಿಡೆನ್‌ಷಿಯಲ್ಸ್‌ಗಳನ್ನು "ಕೋವಿಡ್ ಕರ್ನಾಟಕ" ಪೋರ್ಟಲ್ http://covid.karnataka.tech/ ನಲ್ಲಿ ಪಡೆಯಬಹುದಾಗಿದೆ (ಪತ್ರ ಸಂಖ್ಯೆ: HFW 94 CGM 2020 ದಿನಾಂಕ: 17.04.2020). |
| 4 | ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ ರವರು ರಾಜ್ಯದ ಎಲ್ಲಾ ಸರ್ಕಾರಿ ವೈದ್ಯಕೀಯ ಮಹಾ ವಿದ್ಯಾಲಯಗಳ ನಿರ್ದೇಶಕರುಗಳಿಗೆ ಕಡ್ಡಾಯವಾಗಿ ಕ್ಲಿನಿಕಲ್ ಟ್ರಯಲ್ ಆಫ್ ಪ್ಲಾಸಮಾ ಥೆರಪಿ – ಕೋವಿಡ್–19 ರೋಗಿಗಳ ಕುರಿತ ಪ್ರಸ್ತಾವನೆಯನ್ನು ತುರ್ತಾಗಿ ಐ.ಸಿ.ಎಂ.ಆರ್. ಮತ್ತು ಡಿ.ಸಿ.ಜಿ.ಐ ರವರಿಗೆ ಸಲ್ಲಿಸಲು ಆದೇಶಿಸಿರುತ್ತಾರೆ (ಪತ್ರ ಸಂಖ್ಯೆ: HFW 88 ACS 2020 ದಿನಾಂಕ: 21.04.2020). |
| 5 | ರಾಜ್ಯದಲ್ಲಿ ಕೋವಿಡ್–19 ರನ್ನು ತಡೆಗಟ್ಟುವ ನಿಟ್ಟಿನಡಿ ರಾಜ್ಯದ ಎಲ್ಲಾ ಸಚಿವಾಲಯದ ಎಲ್ಲಾ ಇಲಾಖೆಯ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿಗಳು ಅಗತ್ಯವಾಗಿ ಅನುಸರಿಸಬೇಕಾದ ಮುನ್ನೆಚ್ಚರಿಕಾ ಕ್ರಮಗಳ ಮಾಹಿತಿ ಕುರಿತು ರಾಜ್ಯ ಸರ್ಕಾರವು ಸುತ್ತೋಲೆಯನ್ನು ಹೊರಡಿಸಿದೆ. (Ref No. ಸಿ.ಆ.ಸು.ಇ. 123 ಡಿ.ಬಿ.ಎಂ. 2020 ದಿನಾಂಕ 20.04.2020) |
| 6 | ಈ ಹಿಂದೆ ನೀಡಲಾಗಿರುವ ಸರ್ಕಾರದ ಆದೇಶ ಸಂಖ್ಯೆ ಪಸಂಮೀ 49 ಕಹಾಮ 2018 ದಿನಾಂಕ:02.04.2020, 04.04.2020 ಮತ್ತು 13.04.2020 ಕ್ಕೆ ಮುಂದುವರೆದಂತೆ ಕರ್ನಾಟಕ ಸರ್ಕಾರಿ ಹಾಲು ಉತ್ಪಾದಕರ ಮಹಾಮಂಡಳಿ ನಿಯಮಿತದ ಆಯಾ ಹಾಲು ಒಕ್ಕೂಟಗಳ ವ್ಯಾಪ್ತಿಯ ಅಧಿಸೂಚಿತ ಕೊಳಗೇರಿಗಳು, ಅಧಿಸೂಚಿತವಲ್ಲದ ಗುರುತಿಸಲ್ಪಟ್ಟ ಕೊಳಗೇರಿಗಳು, ಕಟ್ಟಡಗಳ ಕಾರ್ಮಿಕರ ವಸತಿ ತಾಣಗಳು ಮತ್ತು ವಲಸಿಗ ಕಾರ್ಮಿಕರಿಗಾಗಿ, ಸರ್ಕಾರದ ವತಿಯಿಂದ ಪ್ರಾರಂಭಿಸಲ್ಪಟ್ಟಿರುವ ತಾತ್ಕಾಲಿಕ ಪುರ್ನರ್‌ವಸತಿ ಶಿಭಿರಗಳ ನಿವಾಸಿಗಳಿಗೆ ಕುಟುಂಬಕ್ಕೆ ಪ್ರತಿ ದಿನ ಹಾಲನ್ನು 1/2 ಲೀಟರ್‌ನಂತೆ ದಿನಾಂಕ 22.04.2020 ರಿಂದ 30.04.2020 ರವರೆಗೆ ಉಚಿತವಾಗಿ ವಿತರಣೆಯು ಮುಂದುವರೆಸುವಂತೆ ರಾಜ್ಯ ಸರ್ಕಾರವು ಆದೇಶ ಹೊರಡಿಸಿದೆ (Ref No. ಪಸಂಮೀ 49 ಕಹಾಮ 2018 ದಿನಾಂಕ 21.04.2020). |
| 7 | ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿರುವ 31 ಜ್ವರ ಚಿಕಿತ್ಸಾಲಯದಲ್ಲಿ ದಿನಾಂಕ 20.04.2020 ರಂದು ಒಟ್ಟು **150** ವ್ಯಕ್ತಿಗಳನ್ನು ತಪಾಸಣೆ ಮಾಡಲಾಗಿದೆ. ಈವರೆಗೂ ಒಟ್ಟಾರೆ **4623** ವ್ಯಕ್ತಿಗಳಿಗೆ ತಪಾಸಣೆ ನಡೆಸಲಾಗಿದೆ.<br>ರಾಜ್ಯಾದ್ಯಂತ **475** ಜ್ವರ ಚಿಕಿತ್ಸಾಲಯದಲ್ಲಿ ದಿನಾ**ಂಕ** **20.04.2020** ರಂದು ಒಟ್ಟು **11,661** ವ್ಯಕ್ತಿಗಳನ್ನು ತಪಾಸಣೆ ಮಾಡಲಾಗಿದೆ. ಈವರೆಗೂ ಒಟ್ಟಾರೆ **87,681** ವ್ಯಕ್ತಿಗಳಿಗೆ ತಪಾಸಣೆ ನಡೆಸಲಾಗಿದೆ. |
| 8 | **Home Quarantine Enforcement Squad** ತಂಡದವರು, ಸಾರ್ವಜನಿಕರಿಂದ ಪಡೆದ ದೂರುಗಳ ಮೇರೆಗೆ ದಿನಾಂಕ **20.04.2020** ರಂದು ಒಟ್ಟು **26** ವ್ಯಕ್ತಿಗಳನ್ನು ಸಂಸ್ಥೆಗಳಲ್ಲಿ ಕ್ವಾರಂಟೈನ್ ಮಾಡಿರುತ್ತಾರೆ. ಇದೂವರೆವಿಗೂ ಒಟ್ಟಾರೆಯಾಗಿ **622** ವ್ಯಕ್ತಿಗಳನ್ನು ಮನೆ ಕ್ವಾರಂಟೈನ್‌ನಿಂದ ನಿಗಧಿತ ಸಂಸ್ಥೆಗಳಲ್ಲಿ ಕ್ವಾರನ್‌ಟೈನ್‌ಗೆ ವರ್ಗಾವಣೆ ಮಾಡಿರುತ್ತಾರೆ. |
| 9 | ನಿಯೋಜಿತ ಆಸ್ಪತ್ರೆಗಳಲ್ಲಿ ದಾಖಲಾಗಿರುವ ಕೋವಿಡ್–19 ಪಾಸಿಟಿವ್ ಪ್ರಕರಣಗಳು ಮತ್ತು ಶಂಕಿತರು ಕನಿಷ್ಠ 14 ದಿನಗಳ ಕಾಲ ಅಥವಾ ಪಾಸಿಟಿವ್ ಪ್ರಕರಣದ ಸರಣಿ ಮಾದರಿಗಳು ನೆಗೆಟಿವ್ ಎಂದು ಸಾಬೀತಾಗುವ ತನಕ ಅಥವಾ ಅವರಿಗೆ ಚಿಕಿತ್ಸೆ ನೀಡುತ್ತಿರುವ ವೈದ್ಯರ ಸಲಹೆ ಸಿಗುವ ತನಕ ಸಂಬಂಧಪಟ್ಟ ವ್ಯಕ್ತಿಗಳನ್ನು ಬಿಡುಗಡೆ ಮಾಡಲಾಗುವುದಿಲ್ಲ. ಪ್ರತ್ಯೇಕ ವ್ಯವಸ್ಥೆಯಲ್ಲಿ ಇಷ್ಟೊಂದು ಸುದೀರ್ಘ ಕಾಲ ಸಂಯಮದಿಂದ ಇರಲು ಮಾನಸಿಕ ಸ್ಥೈರ್ಯದ ಅಗತ್ಯವಿರುತ್ತದೆ. **ಈ ಅಗತ್ಯವನ್ನು ಮನಗಂಡು ಇಲಾಖೆಯು ಅಂತಹ ರೋಗಿಗಳಿಗೆ ಸ್ಥೈರ್ಯ ತುಂಬುವ ನಿಟ್ಟಿನಲ್ಲಿ ಸದರಿಯವರಿಗೆ** ಮಾನಸಿಕ ಆರೋಗ್ಯದ **ಸಂಪರ್ಕಿತ ಆಪ್ತ ಸಮಾಲೋಚನೆ ಸೇವೆಗಳನ್ನು ಕಲ್ಪಿಸುತ್ತಿದೆ. ಅದರಂತೆ,** ದಿನಾಂಕ **20.04.2020** ರಂದು ಒಟ್ಟು **1220** ಸಂಖ್ಯೆಯ ಮತ್ತು ಇಲ್ಲಿಯವರೆಗೂ ಒಟ್ಟಾರೆಯಾಗಿ **44,506** ಸಂಖ್ಯೆಯ ಸಂಪರ್ಕಿತ ಆಪ್ತ ಸಮಾಲೋಚನೆ ಸೇವೆಗಳನ್ನು ನೀಡಲಾಗಿರುತ್ತದೆ. |
| 10 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ, ಭಾರತ ಸರ್ಕಾರವು, ಕೋವಿಡ್–19ರ ಕುರಿತ ಜನಜಾಗೃತಿ ಮತ್ತು ಪರಿಣಾಮಕಾರಿ ಸಂವಹನವನ್ನು ಪ್ರಚಾರಿಸುವ ಉದ್ದೇಶದಿಂದ ದಿನಾಂಕ 09.04.2020 ರಂದು ***"ಆರೋಗ್ಯ ಸೇತು"*** ಎಂಬ |

| | |
|---|---|
| | ನೂತನ ಮೊಬೈಲ್ ಆ್ಯಪ್‌ನ್ನು ಬಿಡುಗಡೆಗೊಳಿಸಿದೆ. ಸಾರ್ವಜನಿಕರು ಸದರಿ ಆ್ಯಪ್‌ನ್ನು ***ಗೂಗಲ್ ಪ್ಲೇ ಸ್ಟೋರ್ ಮತ್ತು ಆ್ಯಪ್ ಸ್ಟೋರ್‌ನಲ್ಲಿ (ಆ್ಯಪಲ್)*** ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. |
| 11 | ನಿಜಾಮುದ್ದೀನ್ ಮರ್ಕಜ್ ಮಸೀದಿ, ನವ ದೆಹಲಿಯಲ್ಲಿ ಜರುಗಿದ **ತಬ್ಲಿಘಿ ಝಮಾತ್ ಧರ್ಮಸಭೆಯಲ್ಲಿ** ಭಾಗವಹಿಸಿದ ಪ್ರತಿಯೊಬ್ಬರು ಸಹ ಕಡ್ಡಾಯವಾಗಿ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಉಚಿತ ಆರೋಗ್ಯ ಸಹಾಯವಾಣಿ **080–29711171ಕ್ಕೆ** ಕರೆ ಮಾಡಿ ಸಂಪರ್ಕಿಸುವುದು. |
| 12 | ಅಲ್ಪ ಸಂಖ್ಯಾತರ ಕಲ್ಯಾಣ, ವಕ್ಫ್ ಹಾಗೂ ಹಜ್ ಇಲಾಖೆಯವರು, ಕೋವಿಡ್–19 ಸಂದರ್ಭದಲ್ಲಿ ದಿನಾಂಕ 03.05.2020 ರವರೆಗೆ ಮಸಿಜ್ದಿದ್ ಮತ್ತು ದರ್ಗಾಗಳಲ್ಲಿನ ಪ್ರಾರ್ಥನೆಗಳನ್ನು (ಸಲಾತ್) ಮತ್ತು ರಮಾದಾನ್ ಆಚರಣೆಯನ್ನು ಸ್ಥಗಿತಗೊಳಿಸುವ ಕುರಿತು ಮಾರ್ಗಸೂಚಿ ಮತ್ತು ಆದೇಶವನ್ನು ಹೊರಡಿಸಿರುತ್ತಾರೆ. (ಆದೇಶ ಸಂಖ್ಯೆ MWD/2/MDS/2020, Bengaluru ದಿನಾಂಕ 16.04.2020) |
| 13 | ಮಾನ್ಯ ಮುಖ್ಯ ಮಂತ್ರಿಗಳು ಕೋವಿಡ್–19 ನಿಯಂತ್ರಣಕ್ಕೆ ಸ್ವಇಚ್ಛೆಯಿಂದ ಟೆಲಿಮೆಡಿಸನ್ ಮುಖಾಂತರ ಸೇವೆ ಸಲ್ಲಿಸಲು ಬಯಸುವ **ವೈದ್ಯರಿಗೆ ದೂರವಾಣಿ ಸಂಖ್ಯೆ 080–47192219** ಗೆ ಮಿಸ್ಡ್ ಕಾಲ್ ನೀಡಲು ಅಥವಾ **https://forms.gle/TPbU7eZgazdxG9gS9** ನಲ್ಲಿ ಸೈನ್ ಅಪ್ ಮಾಡಿಕೊಂಡು ಸರ್ಕಾರಕ್ಕೆ ಸಹಾಯ ಮಾಡಲು ಮನವಿ ಮಾಡಿಕೊಂಡಿರುತ್ತಾರೆ. |
| 14 | ಕರೋನಾ ನಿಗಾವಣೆ / ಮೊಬೈಲ್ ಅಪ್ಲಿಕೇಷನ್‌ನ್ನು **www.karnataka.gov.in** ಈ ಮೂಲಕ ಡೌನಲೋಡ್ ಮಾಡಿಕೊಳ್ಳಬಹುದಾಗಿದೆ. ಸದರಿ ಅಪ್ಲಿಕೇಷನ್‌ನಲ್ಲಿ ಕೋವಿಡ್–19 ರೋಗಿಯು ಪ್ರಯೋಗಶಾಲಾ ಫಲಿತಾಂಶಕ್ಕೆ ಮೊದಲು 14 ದಿವಸ ಪ್ರಯಾಣ ಮಾಡಿದ ವಿವಿಧ ಸ್ಥಳ / ಪ್ರದೇಶಗಳ ಮಾಹಿತಿ ಲಭ್ಯವಿರುತ್ತದೆ. ಅದರ ಜೊತೆಗೆ ಫಸ್ಟ್ ರೆಸ್‌ಪಾಂಡರ್ ಆಸ್ಪತ್ರೆಗಳ ಮಾಹಿತಿ ಹಾಗೂ ಸಹಾಯವಾಣಿಗಳ ಸಂಖ್ಯೆ ಲಭ್ಯವಿರುತ್ತದೆ. |
| 15 | ಕೋವಿಡ್–19 ಸಂಬಂಧಿತ ಎಲ್ಲಾ ರೀತಿಯ ಹೆಚ್ಚಿನ ಮಾಹಿತಿಗಾಗಿ ಉಚಿತ ಆರೋಗ್ಯ ಸಹಾಯವಾಣಿ ಸಂಖ್ಯೆ **104** ರನ್ನು ಮತ್ತು ಹೊಸ ಸಂಖ್ಯೆ **9745697456** ರನ್ನು ಸಂಪರ್ಕಿಸಬಹುದಾಗಿದೆ. |

104 ಆರೋಗ್ಯ ಸಹಾಯವಾಣಿ (ಶುಲ್ಕರಹಿತ ಕಾಲ್ ಸೆಂಟರ್) ಕೋವಿಡ್–19 ಕುರಿತ ಕರೆಗಳಿಗಾಗಿ 210 ಆಸನಗಳನ್ನು ಮೀಸಲಿರಿಸಿದೆ. ದಿನಾಂಕ **20.04.2020** ರಂದು **3,802** ಕರೆಗಳನ್ನು ಸ್ವೀಕರಿಸಲಾಗಿದೆ.

**ಸಾರ್ವಜನಿಕರಿಗೆ ಮನವಿ:** ಕೋವಿಡ್–19 ಪೀಡಿತ ದೇಶಗಳಿಂದ ಹಿಂತಿರುಗಿರುವ ಅಥವಾ ಸೋಂಕಿತ ವ್ಯಕ್ತಿಯ ಸಂಪರ್ಕದಲ್ಲಿರುವ ಯಾರಾದರೂ ಭಾರತಕ್ಕೆ ಹಿಂತಿರುಗಿದ ದಿನದಿಂದ 14 ದಿನಗಳವರೆಗೆ, ರೋಗ ಲಕ್ಷಣಗಳು ಇರಲಿ ಅಥವಾ ಇಲ್ಲದಿರಲಿ ಮನೆಯಲ್ಲಿ ಪ್ರತ್ಯೇಕವಾಗಿರುವುದು ಹಾಗೂ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ವರದಿ ಮಾಡಿಕೊಳ್ಳುವುದು ಅಥವಾ 104 ಉಚಿತ ಆರೋಗ್ಯ ಸಹಾಯವಾಣಿಗೆ ಕರೆ ಮಾಡುವುದು. ವೈಯಕ್ತಿಕ ಸ್ವಚ್ಚತೆಯನ್ನು ಕಾಪಾಡಿಕೊಳ್ಳಿ. ಕೆಮ್ಮುವಾಗ ಅಥವಾ ಸೀನುವಾಗ ಕರವಸ್ತ್ರ / ಟಿಶ್ಯೂ ಪೇಪರನ್ನು ಬಳಸಿ, ಕೈ ಸ್ವಚ್ಛಗೊಳಿಸುವ ದ್ರಾವಣ (ಸ್ಯಾನಿಟೈಸರ್) ಅಥವಾ ನೀರು ಮತ್ತು ಸೋಪು ಬಳಸಿ ಆಗಾಗ ಕೈಗಳನ್ನು ತೊಳೆದುಕೊಳ್ಳಿ ಮತ್ತು ಸಾಮಾಜಿಕ ಸಮೂಹ ಗುಂಪು ಸೇರುವಿಕೆಯನ್ನು ಮಾಡಬೇಡಿ.

***ನಿಮಗೆ ಸಹಾಯ ಮಾಡಲು ನಮಗೆ ನೆರವು ನೀಡಿ***
***ನಾವೆಲ್ಲರೂ ಒಟ್ಟಾಗಿ ಕೋವಿಡ್–19 ವಿರುದ್ಧ ಹೋರಾಡೋಣ***
***ಮನೆಯಲ್ಲಿಯೇ ಇರಿ, ಸುರಕ್ಷಿತವಾಗಿರಿ***
**ಉಚಿತ ಆರೋಗ್ಯ ಸಹಾಯವಾಣಿ ಸಂಖ್ಯೆ 104ಕ್ಕೆ ಹಾಗೂ**
**9745697456, 080–46848600, 080–66692000 ಕ್ಕೆ ಕರೆಮಾಡಿ**

ಎಲ್ಲ ರೀತಿಯ ಮಾರ್ಗಸೂಚಿಗಳು ಮತ್ತು ಸಲಹೆಗಳಿಗಾಗಿ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಾಲತಾಣದಲ್ಲಿ ಲಭ್ಯವಿದೆ: **https://karunadu.karnataka.gov.in/hfw/kannada/Pages/covid-19.aspx**

***********